ಹೊದಿಸಿದಂತಿರುತ್ತದೆ. ಅಲ್ಲಿಗೆ ಹೋಗುವ ಬಹು ಪ್ರವಾಸಿಗರು ಫಲಕವನ್ನು ನೋಡಿ ವ್ಯಾಕ್ಸ್ ಮ್ಯೂಸಿಯಂಗೆ ಬರುತ್ತಿದ್ದರು. ಇದರಿಂದ ಇವರ ಉದ್ಯಮಕ್ಕೆ ಅನುಕೂಲವಾಯಿತು.

ನಾನು ದಿನಾಂಕ 12 ಫೆಬ್ರವರಿ 2018ರಂದು ಮೋರೇಶ್ವರಕ್ಕೆ ಹೋಗಿ ಇವರ ವ್ಯಾಕ್ಸ್ ಮ್ಯೂಸಿಯಂನಲ್ಲಿ ನೂರೊಂದು ಬಗೆಯ ಮೋಂಬತ್ತಿಗಳನ್ನು ನೋಡಿ ಮಂತ್ರಮುಗ್ಧಳಾದೆ. ಅಲ್ಲಿ ಗಾಂಧೀಜಿ, ಅಮಿತಾಭ್ ಬಚ್ಚನ್ ಹೀಗೆ ಕೆಲವು ಪ್ರಸಿದ್ಧ ವ್ಯಕ್ತಿಗಳ ಮೂರ್ತಿಗಳನ್ನೂ ಮೇಣದಲ್ಲಿ ಮಾಡಿ ನಿಲ್ಲಿಸಿದ್ದರು. ನಿಜ, ಈ ಮೂರ್ತಿಗಳು ನಾನು ಲಂಡನ್ ಮತ್ತು ಸಿಡ್ನಿಯಲ್ಲಿ ಮೇಡಂ ಟುಸಾಡ್ ವ್ಯಾಕ್ಸ್ ಮ್ಯೂಸಿಯಂನಲ್ಲಿ ಕಂಡಂತಹ ಸಜೀವವೆಂಬ ಭ್ರಮೆ ಹುಟ್ಟಿಸುವಂತೆ ಇರಲಿಲ್ಲ. ಆದರೆ ಸಾಕಷ್ಟು ಹೋಲಿಕೆ ಇರುವಂತೆ ಅಂಧ ತಂಡವೊಂದು ಸ್ಪರ್ಶದಿಂದಲೇ ರೂಪುಕೊಟ್ಟು ತಯಾರಿಸಿದ ಈ ಮೇಣದ ಮೂರ್ತಿಗಳಿಗೆ ತನ್ನದೇ ಆದ ವಿಶೇಷತೆ ಇದೆ.

* * *

ಮೋರೇಶ್ವರಕ್ಕೆ ಬಂದು ಸುಮಾರು ಒಂದು ತಿಂಗಳಾಗಿತ್ತು. ಏಕಾಏಕಿ ದಿನಾಂಕ 12 ಜುಲೈ 2012ರಂದು ಅಮೀರ್ ಖಾನ್ ಪ್ರೊಡಕ್ಷನ್‌ನಿಂದ ನಿರ್ಮಾಣವಾಗುತ್ತಿದ್ದ 'ಸತ್ಯಮೇವ ಜಯತೆ'ಯ ತಂಡದ ಫೋನ್ ಬಂದಿತು. ನಾಳೆ ಅಮೀರ್ ಖಾನ್ 'ಸತ್ಯಮೇವ ಜಯತೆ'ಯ ಶೂಟಿಂಗ್‌ಗಾಗಿ ನಿಮ್ಮನ್ನು ಬಂದು ಭೆಟ್ಟಿಯಾಗಲಿದ್ದಾರೆ. ಅವರು ನಿಮ್ಮ ಸಂದರ್ಶನ ಮಾಡಲು ಇಚ್ಛಿಸುತ್ತಾರೆ ಎಂದು ಹೇಳಿದರು. ಅಮೀರ್ ಖಾನ್ ಅವರ ಶೂಟಿಂಗ್ ಸುಮಾರು 20 ಕಿ.ಮೀ. ದೂರದಲ್ಲಿ ಇರುವ ಪಂಚ್ಗನಿಯಲ್ಲಿ ನಡೆಯುತ್ತಿತ್ತು. ಅವರು ಮುಂದುವರೆಸಿ, 'ನಿಮ್ಮ ಈ ಮೋಂಬತ್ತಿಯ ಕೆಲಸದ ಬಗ್ಗೆ ನಮಗೆ ಪೂರ್ಣ ಮಾಹಿತಿ ಇದೆ. ನಿಮ್ಮನ್ನು 'ಸತ್ಯಮೇವ ಜಯತೆ' ಕಾರ್ಯಕ್ರಮದೊಡನೆ ಜೋಡಿಸಲು ನಮಗೆ ತುಂಬಾ ಸಂತಸವಾಗುತ್ತಿದೆ' ಎಂದು ಹೇಳಿದರು. ಫೋನ್‌ನಲ್ಲಿ ಭಾವೇಶ್ ಒಪ್ಪಿಗೆ ಸೂಚಿಸಿದರು.

ಆ ಫೋನ್ ಬಂದಿದ್ದು ಮಧ್ಯಾಹ್ನದ ಹೊತ್ತು. ಮರುದಿನ ಬೆಳಗ್ಗೆಯೇ ಅವರ ತಂಡ ಆಗಮಿಸಲಿತ್ತು. ಸ್ವಲ್ಪ ಮೊದಲೇ ಗೊತ್ತಾಗಿದ್ದರೆ ಚೆನ್ನಿತ್ತು ಅನಿಸಿದ್ದು ನಿಜ. ಆದರೆ ಮತ್ತೆ ಕೆಲವು ದಿನ ಬಿಟ್ಟು ಬರಲು ಹೇಳುವುದು ಉಚಿತವಲ್ಲ ಅನಿಸಿತ್ತು. ಅವಕಾಶ ಬಂದು ಬಾಗಿಲು ಬಡಿಯುವಾಗ ಭಾವೇಶ್ ನಾಳೆ ಬಾ ಎಂದವರಲ್ಲ. ಆ ನಾಳೆಯನ್ನು ಕಂಡವರಾರು? ಈ ಅವಕಾಶ ಕೇವಲ ಅವರ ವೈಯಕ್ತಿಕ ಪ್ರಸಿದ್ಧಿಯದಾಗಿರಲಿಲ್ಲ. ಸನ್‌ರೈಸ್ ಕ್ಯಾಂಡಲ್ಸ್‌ನ ಅವರ ಅಂಧ ತಂಡಕ್ಕೆ ಸಿಗುವ ಗಮನ ಮತ್ತು ಗೌರವದ ಅವಕಾಶ ಇದಾಗಿತ್ತು.

ಇಷ್ಟು ಕಡಿಮೆ ಸಮಯದಲ್ಲಿ ತಯಾರಿ ಮಾಡುವುದು ಹೇಗೆ? ಇದು ನಿಜಕ್ಕೂ ಸವಾಲಿನದಾಗಿತ್ತು. ಇಂತಹ ಸುಪ್ರಸಿದ್ಧರು ತಮ್ಮ ಮನೆಗೆ ಬರುತ್ತಿದ್ದಾರೆ ಎಂದರೆ, ಮೊದಲಿಗೆ ಇಡೀ ಜಾಗ ಸ್ವಚ್ಛ ಮಾಡಬೇಕು. ಅವರನ್ನು ಸ್ವಾಗತಿಸಲು ಒಂದಿಷ್ಟು ಅಲಂಕರಿಸಬೇಕು. ಬಂದವರ ಬಳಿ ಹೆಚ್ಚು ಸಮಯ ಇರಲಾರದು. ತನ್ನ ತಂಡದ ಸಾಧನೆಯ ಬಗ್ಗೆ ಒಂದಿಷ್ಟು ತಕ್ಷಣ ತಿಳಿಯುವಂತೆ ಮಾಡುವುದು ಹೇಗೆ ಎಂದು ಯೋಚಿಸಿದರು. ಅವರಲ್ಲಿ ಬಹಳಷ್ಟು ಪ್ರಶಸ್ತಿಗಳು, ಟ್ರೋಫಿಗಳು ಮತ್ತು ಮೆಡಲ್‌ಗಳು ಇದ್ದವು. ಇವಲ್ಲದೆ ಪತ್ರಿಕೆಗಳಲ್ಲಿ ಸನ್‌ರೈಸ್ ಬಗ್ಗೆ ಪ್ರಕಟವಾದ ಲೇಖನಗಳು ಬಹಳಷ್ಟಿದ್ದವು. ಭಾವೇಶ್, ಭಾವಸಾ ಅವರಿಗೆ ಫೋನ್ ಮಾಡಿ ಶೂಟಿಂಗ್ ಬಗ್ಗೆ ತಿಳಿಸಿದರು. ಆ ದಿನ ಭಾವಸಾ ಅವರ ಬಂಗಲೆಗೆ ಅದೃಷ್ಟವಶಾತ್ ಇಂಟೀರಿಯರ್ ಡೆಕೊರೇಟರ್ ಕವಿತಾ ಅವರು ಬಂದಿದ್ದರು. ಕವಿತಾ ಅವರನ್ನು ಭಾವಸಾ ಕರೆದುಕೊಂಡು ಶೀಘ್ರವಾಗಿ ವ್ಯಾಕ್ಸ್ ಮ್ಯೂಸಿಯಂಗೆ ಬಂದರು. ಭಾವೇಶ್ ಅವರೊಡನೆ ಮಾತನಾಡಿದಾಗ, ಕವಿತಾ ಆ ಎಲ್ಲ ಪ್ರಶಸ್ತಿ ಪುರಸ್ಕಾರಗಳ ಫೋಟೋಗಳನ್ನು, ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳನ್ನು ಕೂಡಿಸಿ ಒಂದು ಬ್ಯಾನರ್ ತಯಾರಿಸಲು ಸೂಚಿಸಿದರು.

ನೀತಾ ತಮ್ಮ ಬ್ಯಾನರ್ ತಯಾರಿಸುವ ಮಿತ್ರರನ್ನು ಕರೆದರು. ಅವರು ಸನ್‌ರೈಸ್‌ನ ಬಹಳಷ್ಟು ಪ್ರದರ್ಶನಗಳಿಗೆ ಬ್ಯಾನರ್ ವಿನ್ಯಾಸ ಮಾಡಿದ್ದರು. ಈಗ ಕವಿತಾ ಅವರ ಸಲಹೆಯಂತೆ ಪ್ರಶಸ್ತಿ, ಪ್ರದರ್ಶನಗಳ ಫೋಟೋಗಳನ್ನು, ಸುದ್ದಿಪತ್ರಿಕೆಯಲ್ಲಿ ಬಂದ ಲೇಖನಗಳನ್ನು ಒಟ್ಟಿಗೆ ಕೂಡಿಸಿ ಆಕರ್ಷಕ ರೂಪದಲ್ಲಿ ಬ್ಯಾನರ್ ವಿನ್ಯಾಸ ಮಾಡಿದರು. ರಾತ್ರಿ 11 ಗಂಟೆಯ ಹೊತ್ತಿಗೆ ಬ್ಯಾನರ್‌ಗಳು ಸಿದ್ಧವಾಗಿ ಇವರಿಗೆ ತಲುಪಿದವು. ಅಷ್ಟು ಹೊತ್ತಿಗೆ ಭಾವೇಶ್ ಅವರ ಕೆಲವು ಮಿತ್ರರು ಮತ್ತು ಸ್ವಯಂಸೇವಕರು ಅವರಿಗೆ ಸಹಾಯ ಮಾಡಲು ಬಂದು ತಲುಪಿದರು. ಕ್ಯಾಂಡಲ್ ಪ್ರದರ್ಶನ ಮಾಡಿದ್ದ ಗಾಜಿನ ಅಲಮಾರುಗಳ ಮೇಲುಗಡೆ ಮತ್ತು ಆಸುಪಾಸಿನಲ್ಲಿ ಎಲ್ಲಿ ಖಾಲಿ ಗೋಡೆಗಳಿದ್ದವೋ, ಅಲ್ಲೆಲ್ಲಾ ನೀತಾ ಅವರ ಮಾರ್ಗದರ್ಶನದಲ್ಲಿ ಆ ಬ್ಯಾನರ್‌ಗಳನ್ನು ಅಂಟಿಸಿದರು. ಇಡೀ ರಾತ್ರಿ ನಿದ್ರೆ ಇಲ್ಲದೆ ನಡೆದ ಕೆಲಸವಿದು. ಜೊತೆಯಲ್ಲಿಯೇ ವ್ಯಾಕ್ಸ್ ಮ್ಯೂಸಿಯಂ ಅನ್ನು ಸಿಂಗರಿಸಿದರು. ಮೇಣದಿಂದ ಮಾಡಿದ ಹೂವುಗಳಿಂದ ಒಂದು ಹೂಗುಚ್ಛವನ್ನು ತಯಾರಿಸಿದರು.

ಬೆಳಗ್ಗೆ 10 ಗಂಟೆಗೆ ಅಮೀರ್ ಖಾನ್ ಅವರನ್ನು ಸ್ವಾಗತಿಸಲು ಭಾವೇಶ್ ಮತ್ತು ಅವರ ಇಡೀ ತಂಡ ಪೂರ್ಣ ರೂಪದಲ್ಲಿ ಸಿದ್ಧವಾಗಿತ್ತು. ಮರುದಿನ ಮುಂಜಾನೆ ಹತ್ತು ಗಂಟೆಗೆ ಸರಿಯಾಗಿ 'ಸತ್ಯಮೇವ ಜಯತೆ' ತಂಡ ಸ್ವಾತಿ ಚಕ್ರವರ್ತಿ ಅವರ ಜೊತೆಯಲ್ಲಿ ಬಂದು ತಲುಪಿತು. ಸುಮಾರು 1215 ಜನ ಅವರೊಡನೆ ಬಂದಿದ್ದರು. ಕ್ಯಾಮೆರಾಮನ್‌ನಿಂದ ಹಿಡಿದು ನಿರ್ದೇಶಕರು, ಎಲ್ಲರೂ ತಮ್ಮ ತಮ್ಮ ಕೆಲಸದಲ್ಲಿ ತೊಡಗಿದರು. ಉಳಿದ ಶೂಟಿಂಗ್‌ಗೆ ಬೇಕಾದ ತಯಾರಿಯ ಕೆಲಸ ಮುಗಿಯುವ ಹೊತ್ತಿಗೆ ಮಧ್ಯಾಹ್ನ ಹನ್ನೆರಡೂವರೆ ಗಂಟೆಯಾಗಿತ್ತು. ಸುಮಾರು ಒಂದು ಗಂಟೆಗೆ ಅವರೆಲ್ಲ ನಿರೀಕ್ಷಿಸುತ್ತಿದ್ದ ಕ್ಷಣ ಬಂದಿತ್ತು. ಅಮೀರ್ ಖಾನ್ ವ್ಯಾಕ್ಸ್ ಮ್ಯೂಸಿಯಂಗೆ ಆಗಮಿಸಿದರು. ತಕ್ಷಣವೇ ಸಂದರ್ಶನದ ಕೆಲಸ ಆರಂಭವಾಯಿತು. 'ಸತ್ಯಮೇವ ಜಯತೆ' ಬಹಳಷ್ಟು ಲೋಕಪ್ರಿಯವಾಗಿದ್ದ ಕಾರ್ಯಕ್ರಮ. ಅದರಲ್ಲಿ ತಮ್ಮ ಸನ್‌ರೈಸ್ ಮೋಂಬತ್ತಿಗಳ ಪರಿಚಯವಾಗುವುದು ದೊಡ್ಡ ವಿಷಯವಾಗಿತ್ತು. ಇವರ ಮೋಂಬತ್ತಿಗಳನ್ನು, ಇವರ ಅಂಧ ಸೋದರ ಸೋದರಿಯರ ತಂಡವನ್ನು ಸಹಸ್ರಾರು ಜನರಿಗೆ ಒಟ್ಟಿಗೆ ಪರಿಚಯಿಸುವ ಅವಕಾಶ ಇದಾಗಿತ್ತು. ಇಲ್ಲಿಯವರೆಗೂ ಈ ಪ್ರಸಿದ್ಧ ವ್ಯಕ್ತಿಯ ಬಗ್ಗೆ ಕೇಳಿದ್ದರು. ಈ ದಿನ ಅವರ ಎದುರು ಕುಳಿತು ಮಾತನಾಡುವುದು ತಮ್ಮ ಸೌಭಾಗ್ಯ ಎಂದು ಭಾವೇಶ್ ಅವರಿಗೆ ಅನಿಸಿತು.

ಅಮೀರ್ ಖಾನ್ ಅವರ ಮೊದಲ ಪ್ರಶ್ನೆಯೇ 'ಮಿಸ್ಟರ್ ಭಾಟಿಯಾ, ನೀವು ಚಲನಚಿತ್ರಗಳನ್ನು ನೋಡುತ್ತೀರಾ?'

ಭಾವೇಶ್ ಥಟ್ಟನೆ ಹೇಳಿದರು 'ಹೌದು, ನಾನು ನೋಡುತ್ತೇನೆ'. ಭಾವೇಶ್ ಎಂದೂ ನಾನು ಕೇಳುತ್ತೇನೆ ಅನ್ನುವುದಿಲ್ಲ. ಕಾರಣ ಬಾಲ್ಯದಲ್ಲಿಯೇ ಅವರು ಸಾಮಾನ್ಯ ಜನರು ಮಾತನಾಡುವ ಮತ್ತು ವ್ಯವಹರಿಸುವ ರೀತಿಯನ್ನು ಕಲಿತಿದ್ದರು.

ಅವರ ಮರು ಪ್ರಶ್ನೆ 'ಈಗ ಹೇಳಿ, ನನ್ನ ಯಾವ ಚಿತ್ರ ನಿಮಗೆ ಇಷ್ಟವಾಯಿತು?'

ಭಾವೇಶ್ ತಕ್ಷಣ ಹೇಳಿದರು 'ನಿಮ್ಮ ಮನ್ ಚಿತ್ರ ನನಗೆ ತುಂಬಾ ಇಷ್ಟವಾಯಿತು. ಕಾರಣ ಆ ಇಡೀ ಕಥೆ ಹೃದಯಸ್ಪರ್ಶಿಯಾಗಿತ್ತು. ಮನೀಷಾ ದುರ್ಘಟನೆಯಲ್ಲಿ ಕಾಲುಗಳನ್ನು ಕಳೆದುಕೊಳ್ಳುತ್ತಾರೆ. ಚಿತ್ರದ ಕ್ಲೈಮಾಕ್ಸ್‌ನಲ್ಲಿ ನೀವು ಮದುವೆಯ ಸಮಯ ಮನೀಷಾ ಅವರನ್ನು ಮಡಿಲಲ್ಲಿ ಹೊತ್ತುಕೊಂಡು ಅಗ್ನಿಯ ಸುತ್ತ ಪ್ರದಕ್ಷಿಣೆ ಬರುತ್ತೀರಿ. ಎಂತಹ ಅದ್ಭುತ ದೃಶ್ಯ' ಎಂದು ಹೇಳಿದರು. ಕಣ್ಣಿದ್ದ ನಾವು ಪರದೆಯ ಮೇಲೆ ಕಂಡದ್ದು ನಮ್ಮ ನೆನಪಲ್ಲಿ ಮೂಡುವ ಹಾಗೆ, ಭಾವೇಶ್ ಅವರ ಮನಸ್ಸಲ್ಲಿ ಮೂಡಿದ ಶಬ್ದಚಿತ್ರ ನೆನಪಿನ ಅಂಗಳದಲ್ಲಿ ನೂರು ಚಿತ್ತಾರ ಹಾಕಿ ಸ್ಮರಣೆಯಲ್ಲಿ ಉಳಿದಿತ್ತು.

'ಮನ್' ಚಿತ್ರದ ಪ್ರಶಂಸೆಯನ್ನು ಕೇಳಿ ಅಮೀರ್ ಹೇಳಿದರು, 'ನಾವೂ ಕೂಡಾ ಇದೇ ಸಂದೇಶವನ್ನು ಕೊಡಲು ಇಚ್ಛಿಸಿದ್ದೆವು. ಸಮಾಜ ಅಂಗವಿಕಲರನ್ನು ಮಡಿಲಲ್ಲಿ ಎತ್ತಿಕೊಳ್ಳಬೇಕು ಎಂದು.'

ಭಾವೇಶ್ ತಕ್ಷಣ ಹೇಳಿದರು, 'ನೀವು ಆ ಸಂದೇಶ ನೀಡುವಲ್ಲಿ ಪೂರ್ಣ ಸಫಲರಾಗಿದ್ದೀರಿ. ಆದರೆ ಒಂದು ಮಾತು ಹೇಳಲು ನಾನು ಇಚ್ಛಿಸುತ್ತೇನೆ. ನೀವು ಮನೀಷಾ ಅವರನ್ನು ಮಡಿಲಲ್ಲಿ ಎತ್ತಿಕೊಂಡದ್ದು ಸರಿ. ಒಂದು ಪ್ರೀತಿಯ ಸಂದೇಶವನ್ನು ಕೊಟ್ಟಿರಿ. ಆದರೆ ನಾನು ದೃಢವಾಗಿ ಹೇಳುತ್ತೇನೆ, ಈ 21ನೇ ಶತಮಾನದಲ್ಲಿ ಅಂಗವಿಕಲರು ಎಷ್ಟು ಗಟ್ಟಿಯಾಗಿದ್ದಾರೆ ಎಂದರೆ, ಒಮ್ಮೆ ಅವರು ಮನಸ್ಸು ಮಾಡಿದರೆ, ದೃಢಸಂಕಲ್ಪ ಹೊತ್ತರೆ, ಸಮಾಜ ಅವರನ್ನು ಮಡಿಲಲ್ಲಿ ಎತ್ತುವುದೇನು, ಅವರೇ ಇಡೀ ಸಮುದಾಯವನ್ನು, ಸಮಾಜವನ್ನು ಮಡಿಲಲ್ಲಿ ಹೊರುವಷ್ಟು ಶಕ್ತರಾಗುತ್ತಾರೆ. ಇಚ್ಛಾಶಕ್ತಿ, ದೃಢವಾದ ಧ್ಯೇಯ ಬೇಕಿದೆ ಅಷ್ಟೆ' ಎಂದರು.

ಈ ಉತ್ತರ ಅಮೀರ್ ಅವರಿಗೆ ಬಹಳ ಇಷ್ಟವಾಯಿತು. ಅವರು ಜೋರಾಗಿ ಚಪ್ಪಾಳೆ ತಟ್ಟಿದರು. 'ಸತ್ಯಮೇವ ಜಯತೆ'ಯ ಆ